ಓಎಸ್. 243/2022

ಪಿ. ಡಬ್ಲ್ಯೂ.ನಂ. - 1

<u>ದಿನಾಂಕಃ 22.04 2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>

<u>ಮುಖ್ಯ ವಿಚಾರಣೆ : ವಾದಿಯ ಪರ ವಕೀಲರಾದ ಶ್ರೀ. ಕೆ.ವಿ.ಎ. ರವರಿಂದ –</u>

ನಾನು ವಾದಿಯಿಂದ ವಿಶೇಷ ಅಧಿಕಾರ ಪತ್ರವನ್ನು ಪಡೆದು ಅವಳ ಪರವಾಗಿ ಸಾಕ್ಷ್ಯ ನುಡಿಯುತ್ತಿದ್ದೇನೆ. ನಾನು ನನ್ನ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಚಾರಗಳನ್ನು ನಾನು ನನ್ನ ವಕೀಲರಿಗೆ ತಿಳಿಸಿ ನನ್ನ ವಕೀಲರ ಮುಖಾಂತರ ಬರೆಸಿರುತ್ತೇನೆ ಹಾಗೂ ನನ್ನ ಸಹಿಯನ್ನು ಪ್ರಮಾಣ ಪತ್ರಕ್ಕೆ ಹಾಕಿರುತ್ತೇನೆ.

ನಿವೇಶನ ಹಕ್ಕು ಪತ್ರವನು ಹಾಜರುಪಡಿಸಿದ್ದು ಅದನ್ನು ನಿಪಿ–1 ಎಂದು, ದಿಃ 19–11–2012 ರಂದು ನೋಂದಾಯಿಸಲಾಗಿರುವ ಶುದ್ಧ ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ–2 ಎಂದು, ದಿಃ 21.01.2013 ರಂದು ಶ್ರೀಮತಿ ಮುಕ್ತಾ ಬಾಯಿಯವರಿಗೆ ಬಾಲಚಂದ್ರ ಪಿ. ಯಾಜಿ ಬರೆದುಕೊಟ್ಟಿರುವ ನೊಂದಾಯಿತ ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ–3 ಎಂದು, ದಿಃ 15.02.2016 ರಂದು ಮುಕ್ತಾ ಬಾಯಿ ಎನ್ ಚಿತ್ರಗಿ ಮಠ್ ರವರು ನನ್ನ ಹೆಂಡತಿಯಾದ ಸವಿತಾ ರವರಿಗೆ ಬರೆದುಕೊಟ್ಟಿರುವ ನೊಂದಾಯಿತ ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ–4 ಎಂದು, ಆಸ್ತಿ ತೆರಿಗೆ ರಿಜಿಸ್ಟರ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ–5 ಎಂದು, ಪ್ರತಿವಾದಿಗೆ ನಮ್ಮ ವಕೀಲರ ಮೂಲಕ ನೀಡಿದ ಕಾನೂನು ಬದ್ಧ ನೋಟೀಸ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ–6 ಎಂದು, ಅಂಚೆ ಸ್ವೀಕೃತಿ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ–7 ಎಂದು, ಪ್ರತಿವಾದಿ ನೀಡಿದ ಪ್ರತ್ಯುತ್ತರ ನೋಟೀಸ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ–8 ಎಂದು, ನನ್ನ ಹೆಂಡತಿ ನನಗೆ ನೀಡಿರುವ ವಿಶೇಷ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ–9 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ